

ಪೈಪೋಟಿ ನಡೆಸುತ್ತಿವೆ. ಚಿನ್ನಕ್ಕೆ ಹೋಲಿಸಿದರೆ ವಜ್ರಾಭರಣ ದುಬಾರಿ. ಹೀಗಾಗಿ ಇದು ಶ್ರೀಮಂತ ವರ್ಗಕ್ಕೇ ಸೀಮಿತ ಎಂಬುದು ಮಧ್ಯಮವರ್ಗದ ಮಹಿಳೆಯರ ಲೆಕ್ಕಾಚಾರ. ಅಲ್ಲದೆ ಮಾಡೆಲ್‌ಗಳು, ಸಿನಿಮಾ ನಟಿಯರು ವಜ್ರದ ಆಭರಣಕ್ಕೆ ಹೆಚ್ಚು ಒಲವು, ಒತ್ತಾಸೆ ತೋರಿಸುತ್ತಿದ್ದಾರೆ. ಏಕೆಂದರೆ ಇದು ಗ್ರ್ಯಾಂಡ್‌ಲುಕ್ ಕೊಡುತ್ತದೆ. ಇದರ ಜತೆಗೆ ಪ್ಲಾಟಿನಂ ಒಡವೆಗಳೂ ಹೆಚ್ಚು ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ.

ವಜ್ರಾಭರಣ ದೀರ್ಘ ಬಾಳಿಕೆ ಬರುತ್ತದೆ. ಏಕೆಂದರೆ ವಜ್ರದ ಆಭರಣಗಳ ಬಣ್ಣ ಮಾಸುವುದಿಲ್ಲ, ಒಳ್ಳೆಯ ಹೊಳಪು ಇರುತ್ತದೆ, ಮದುವೆ, ಪಾರ್ಟಿ.. ಹೀಗೆ ಯಾವುದೇ ಸಮಾರಂಭಗಳಿಗೆ ಹೋಗುವಾಗಲೂ ಗ್ರ್ಯಾಂಡ್ ಲುಕ್ ಕೊಡುತ್ತದೆ. ಹೀಗಾಗಿ ಆಧುನಿಕ ಮನೋಭಾವದ ಮಹಿಳೆಯರು ಚಿನ್ನದ ಆಭರಣಕ್ಕಿಂತಲೂ ವಜ್ರದ ಒಡವೆಗಳ ಮೇಲೇ ಹೆಚ್ಚಿನ ಒಲವು ತೋರುತ್ತಿದ್ದಾರೆ.

ಕರಕೌಶಲ್ಯ, ಪರಿಪಕ್ವತೆ ಇರುವ ಹಾಗೂ ಸೂಕ್ಷ್ಮದೃಷ್ಟಿಯನ್ನು ಹೊಂದಿರುವ ನುರಿತ ಕೆಲಸಗಾರರಿಂದ ಆಭರಣಗಳನ್ನು ವಿನ್ಯಾಸಗೊಳಿಸಿ ಗ್ರಾಹಕರಿಗೆ ಒದಗಿಸುವುದು ಹೆಚ್ಚಿನ ವಜ್ರಾಭರಣ ಮಳಿಗೆ ಮಾಲೀಕರ ಮುಖ್ಯ ಗುರಿ. ವಿದೇಶಗಳಲ್ಲಿ ವಜ್ರದ ಉಂಗುರಗಳಿಗೆ ಬಹಳ ಬೇಡಿಕೆ ಇದೆ. ಹೆಚ್ಚಾಗಿ ಮದುವೆ ಸಂದರ್ಭದಲ್ಲಿ ವಜ್ರದ ಉಂಗುರಗಳನ್ನು ಜನ ಬಯಸುತ್ತಾರೆ.

ವಜ್ರದ ಆಭರಣಗಳಲ್ಲಿ ಆದಷ್ಟು ಸಿಂಪಲ್ ಆಗಿರುವುದೇ ಮಹಿಳೆಯರು ಬಯಸುತ್ತಾರೆ. ಸಿಂಪಲ್ ಆಗಿರುವ ರಿಂಗ್, ನೆಕ್ಲೆಸ್ ಆಕರ್ಷಕ ಲುಕ್ ಕೊಡುತ್ತದೆ. ನೂರಾರು ವರ್ಷ ಇತಿಹಾಸವಿರುವ ವಜ್ರಾಭರಣಗಳು ಇಂದಿಗೂ ಜನಪ್ರಿಯತೆ ಕಳೆದುಕೊಂಡಿಲ್ಲ. ಜನರ ಭಾವನೆಗಳಿಗೆ ಧಕ್ಕೆಯಾಗದಂತೆ ವಜ್ರಾಭರಣದಲ್ಲಿ ನವಿಲಿನ ವಿನ್ಯಾಸ, ಸೆವೆನ್ ಸ್ಟೋನ್ ಡಿಸೈನ್ ಮುಂತಾದವು ಹೊಸದಾಗಿ ಮಾರುಕಟ್ಟೆಗೆ ಬಂದಿದೆ. ವೈಟ್ ಗೋಲ್ಡ್‌ನಲ್ಲಿಯೂ ಇಂಥ ವಿನ್ಯಾಸಗಳು ಲಭ್ಯ. ಮದುವೆ ಮುಂಜಿ ಮತ್ತಿತರ ಶುಭ ಸಮಾರಂಭ ಗಳಿಗಾಗಿಯೇ ಮಲ್ಟಿಪರ್ಪಸ್ ಜ್ಯುವೆಲ್ಲರಿಗಳೂ ಸಿಗುತ್ತವೆ. ವಜ್ರದೊಂದಿಗೆ ಭಾವನಾತ್ಮಕ ಸಂಬಂಧ ಇಟ್ಟುಕೊಂಡ ಮಹಿಳೆಯರು ನೆಕ್ಲೆಸ್, ರಿಂಗ್, ಓಲೆಗಳಂತಹ ಒಡವೆಗಳತ್ತಲೇ ಚಿತ್ತಹರಿಸಿದ್ದಾರೆ. ■


# RELIV PAIN CENTER

*"life without pain"*

**ಬೆಂಗಳೂರಿನ ಪ್ರಪ್ರಥಮ ಸೂಪರ್ ಸ್ಪೆಷಾಲಿಟಿ ನೋವು ನಿವಾರಣ ಕೇಂದ್ರ**

## LOW BACK PAIN & SCIATICA



**ನೀವು ಬೆನ್ನು ನೋವು ಹಾಗೂ ಕಾಲು (ಸಯಾಟಿಕಾ) ನೋವಿನಿಂದ ಬಳಲುತ್ತಿದ್ದರೆ ಅದನ್ನು ಸರ್ಜರಿ ಇಲ್ಲದೆ ಒಂದು ಚಿಕ್ಕ ಇನ್‌ಜೆಕ್ಷನ್ (ಟ್ರಾನ್ಸ್‌ಪೊರಾಮಿನಲ್ ಎಪಿಡೂರಲ್) ಗುಣಪಡಿಸಬಹುದು.**

**ಅಮೇರಿಕಾ ಹಾಗೂ ಬ್ರಿಟನ್ನಿನ ಅನುಭವಿ ವೈದ್ಯರಿಂದ ಸಲಹೆ ಹಾಗೂ ಚಿಕಿತ್ಸೆ**

**ನೀವು ದೀರ್ಘಕಾಲದಿಂದ ನೋವನ್ನನುಭವಿಸುತ್ತಿದ್ದು, ಸಾಮಾನ್ಯ ಔಷಧಗಳು, ಫಿಸಿಯೋತೆರಪಿ, ಶಸ್ತ್ರಚಿಕಿತ್ಸೆ ಪದ್ಧತಿಗಳಿಂದ ಪರಿಹಾರ ಸಿಕ್ಕಿಲ್ಲವೇ?**

**ಹಾಗಿದ್ದಲ್ಲಿ ಸಹಾಯ ನಮ್ಮಲ್ಲಿದೆ!**

156,25 th cross,19th main
2nd block **Rajajinagar,** Bangalore-560010

36/52,27th cross, 12th main,
4th block **Jayanagar,** Bangalore-560011

**Ph: 888 49 50 444/123** | info@relivpaincenter.com | www.relivpaincenter.com